**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.**

**ಓ.ಎಸ್.ನಂ. 24/2021.**

**ಪಿ ಡಬ್ಲ್ಯೂಃ 1**

**ದಿನಾಂಕಃ 18-03-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಐ.ಎಸ್.ಈ. ವಕೀಲರಿಂದಃ**

ನನ್ನ ಹೆಸರು ಶ್ರುತಿ ಕನ್ನಪ್ಪ ಕೊಪ್ಪದ. ನನ್ನ ಮೊದಲು ಹೆಸರು ಶ್ರುತಿ ಜೆ.ಕೆ. ಎಂದು ಇತ್ತು. ನಾನು ದತ್ತಕ ಆದನಂತರ ಶ್ರುತಿ ಕನ್ನಪ್ಪ ಕೊಪ್ಪದ ಆಗಿರುತ್ತದೆ. ಸದರಿ ದತ್ತಕ ದಿನಾಂಕಃ 07.03.2015 ರಂದು ಆಗಿರುತ್ತದೆ. ನನ್ನ ಶಾಲಾ ದಾಖಲಾತಿಯಲ್ಲಿ ನನ್ನ ಹೆಸರು ಶ್ರುತಿ ಜಿ.ಕೆ. ಎಂದು ಇದೆ. ಉಳಿದ ನನ್ನ ದಾಖಲಾತಿಗಳಲ್ಲಿ ಅಂದರೆ ಬ್ಯಾಂಕ್ ಪಾಸ್ ಬುಕ್, ಆಧಾರ ಕಾರ್ಡ್, ಪಾನ್ ಕಾರ್ಡ್ ನಲ್ಲಿ ನನ್ನ ಹೆಸರು ಶ್ರುತಿ ಕನ್ನಪ್ಪ ಕೊಪ್ಪದ ಎಂದು ಇದೆ. ಯಾವ ದಿನಾಂಕದಂದು ಸದರಿ ಮೇಲೆ ಹೇಳಿದ ದಾಖಲೆಗಳಲ್ಲಿ ನನ್ನ ಹೆಸರು ಶ್ರುತಿ ಕನ್ನಪ್ಪ ಕೊಪ್ಪದ ಎಂದು ನಮೂದಾಗಿದೆ ಎಂದು ನನಗೆ ಹೇಳಲು ಬರುವುದಿಲ್ಲ. ಬ್ಯಾಂಕ್ ಪಾಸ್ ಬುಕ್ಕನ್ನು ಯಾವ ವರ್ಷ ಮಾಡಿಸಿರುತ್ತೇನೆ ಎಂದು ನನಗೆ ನೆನಪಿಲ್ಲ. ಆಧಾರ ಕಾರ್ಡ್ ಹಾಗೂ ಪಾನ್ ಕಾರ್ಡನ್ನು ನಾನು 2 ವರ್ಷದ ಹಿಂದೆ ಮಾಡಿಸಿಕೊಂಡಿರುತ್ತೇನೆ. ನಾನು ದತ್ತಕ ಹೋಗುವ ಮೊದಲು ಆಧಾರ ಕಾರ್ಡ್ ಹೊಂದಿದ್ದೆ. ಸದರಿ ಆಧಾರ ಕಾರ್ಡಿನಲ್ಲಿ ನನ್ನ ಹೆಸರು ಶ್ರುತಿ ಜಿ.ಕೆ. ಎಂದು ಇತ್ತು. ಶ್ರುತಿ ಜಿ.ಕೆ. ಎಂಬ ಹೆಸರಿನ ನನ್ನ ಆಧಾರ ಕಾರ್ಡ ಇದೆ. ಅದನ್ನು ಹಾಜರು ಪಡಿಸಲು ನನಗೆ ತೊಂದರೆ ಇಲ್ಲ.

02. ನಾನು ಬಿ.ಕಾಂ ಓದಿರುತ್ತೇನೆ. ನಿಪಿ-25 ಆಧಾರ ಕಾರ್ಡನ್ನು 2016 ರಲ್ಲಿ ಮಾಡಿಸಲಾಗಿದೆ. 2016 ರಿಂದ ನನ್ನ ಹೆಸರು ಶ್ರುತಿ ಕನ್ನಪ್ಪ ಕೊಪ್ಪದ ಎಂದು ಇದೆ.

ನಿಪಿ-25 ಆಧಾರ ಕಾರ್ಡನ್ನು ನಾನು ಒಂದು ಬಾರಿ ತಿದ್ದುಪಡಿ ಮಾಡಿಸಿರುತ್ತೇನೆ. ಸದರಿ ತಿದ್ದುಪಡಿಯನ್ನು ಈ ದಾವೆಯನ್ನು ದಾಖಲಿಸಿದ ನಂತರ ಮಾಡಿಸಿರುತ್ತೇನೆ. ಸದರಿ ಆಧಾರ ಕಾರ್ಡಿನಲ್ಲಿ ನನ್ನ ಹೆಸರಿನ ಸ್ಪೆಲ್ಲಿಂಗ್ ತಪ್ಪಾಗಿದ್ದನ್ನು ಸರಿಪಡಿಸಿರುತ್ತೇನೆ. 2016 ರ ನಂತರವೂ ನನ್ನಹೆಸರು ನನ್ನ ಆಧಾರ ಕಾರ್ಡಿನಲ್ಲಿ ಶ್ರುತಿ ಜೆ.ಕೆ ಎಂದು ಇತ್ತು ಎಂದರೆ ಸರಿಯಲ್ಲ. ನಿಪಿ-25 ಆಧಾರ ಕಾರ್ಡನ್ನು ದಿನಾಂಕಃ 01.08.2022 ರಂದು ತಿದ್ದುಪಡಿ ಮಾಡಲಾಗಿದೆ ಎಂದರೆ ಸರಿ. 2021 ನೇ ಸಾಲಿನಲ್ಲಿ ಅಂದರೆ ಈ ದಾವೆ ದಾಖಲಿಸುವ ಸಮಯದಲ್ಲಿ ನನ್ನ ಆಧಾರ ಕಾರ್ಡಿನಲ್ಲಿ ನನ್ನ ಹೆಸರು ಏನು ಇತ್ತು ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಸದರಿ ನನ್ನ ಆಧಾರ ಕಾರ್ಡ್ ತಿದ್ದುಪಡಿ ಮಾಡಿಸಿದ ನಂತರ ನನ್ನ ಬ್ಯಾಂಕ್ ಪಾಸ್ ಬುಕ್ ಮಾಡಿಸಿರುತ್ತೇನೆ ಎಂದರೆ ಸರಿ. ದಿನಾಂಕಃ 28.12.2022 ರಂದು ನಾನು ನಿಪಿ-26 ಬ್ಯಾಂಕ್ ಪಾಸ್ ಬುಕ್ ನ್ನು ಮಾಡಿಸಿರುತ್ತೇನೆ. ನಾನು ನಿಪಿ-27 ಪ್ಯಾನ್ ಕಾರ್ಡನ್ನು ಯಾವ ದಿನಾಂಕದಂದ ಮಾಡಿಸಿರುತ್ತೇನೆ ಎಂದು ನೆನಪಿಲ್ಲ. ಈ ದಾವೆ ದಾಖಲಿಸುವ ಕಾಲಕ್ಕೆ ನನ್ನ ಆಧಾರ ಕಾರ್ಡ್, ಪಾನ್ ಕಾರ್ಡ್ ಹಾಗೂ ಬ್ಯಾಂಕ್ ಪಾಸ್ ಬುಕ್ ನಲ್ಲಿ ನನ್ನ ಹೆಸರು ಶ್ರುತಿ ಜೆ.ಕೆ. ಎಂದು ಇತ್ತು ಎಂದರೆ ಸರಿಯಲ್ಲ.

03. ನನ್ನ ಆಧಾರ ಕಾರ್ಡ ತಿದ್ದುಪಡಿ ಮಾಡುವ ಮೊದಲು ಸದರಿ ಆಧಾರ ಕಾರ್ಡಿನಲ್ಲಿ ನನ್ನ ವಿಳಾಸ ಸುಣ್ಣದಕೊಪ್ಪ, ತಾಃ ಶಿಕಾರಿಪೂರ, ಜಿಃ ಶಿವಮೊಗ್ಗ ಎಂದು ಇತ್ತು ಎಂದರೆ ಸರಿ. ನಾನು ಈಗಲೂ ಸುಣ್ಣದಕೊಪ್ಪದಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ನಾನು ಹುಟ್ಟಿದಾಗಿನಿಂದಲೂ ಸುಣ್ಣದಕೊಪ್ಪದಲ್ಲೇ ವಾಸವಾಗಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ದತ್ತಕ ಆದನಂತರ ಬ್ಯಾಡಗಿಯಲ್ಲಿ ಇದ್ದೆ ಎನ್ನುತ್ತಾರೆ. ನಾನು ಹುಟ್ಟದಾಗಿನಿಂದ 2014 ರವರೆಗೆ ಸುಣ್ಣದಕೊಪ್ಪದಲ್ಲಿ ವಾಸವಾಗಿದ್ದೆ ಅಂದರೆ ದತ್ತಕ ಆಗುವವರೆಗೆ ವಾಸವಾಗಿದ್ದೆ ಎನ್ನುತ್ತಾರೆ. 2015 ರಲ್ಲಿ ನಾನು ಬ್ಯಾಡಗಿಗೆ ಪ್ರಥಮ ಬಾರಿ ಯಾವಾಗ ಬಂದಿರುತ್ತೇನೆ ಎಂದು ನನಗೆ ನೆನಪಿಲ್ಲ. ದಿನಾಂಕಃ 07.03.2015 ರಂದು ನಾನು ಹಿರೇಮಾಗಡಿ ಗ್ರಾಮದಿಂದ ಸುಣ್ಣದಕೊಪ್ಪ ಗ್ರಾಮಕ್ಕೆ ಹೋಗಿದ್ದೆ. ನಾನು ಸದರಿ ಸಮಯದಲ್ಲಿ ಸುಣ್ಣದಕೊಪ್ಪ ಗ್ರಾಮದಲ್ಲಿ ಎಷ್ಟು

ದಿನಗಳವರೆಗೆ ಇದ್ದೆ ಎಂದು ನೆನಪಿಲ್ಲ. ಸದರಿ ಸಮಯದಲ್ಲಿ ನಾನು ಯಾವೆಲ್ಲಾ ಗ್ರಾಮಕ್ಕೆ ಹೋಗಿದ್ದೆ ಎಂದು ನನಗೆ ನೆನಪಿಲ್ಲ. ಸದರಿ ದಿನ ನಾನು ಬ್ಯಾಡಗಿಗೆ ಬಂದಿದ್ದೆನೋ ಇಲ್ಲವೊ ಎಂದು ನನಗೆ ನೆನಪಿಲ್ಲ. ಸದರಿ ದಿನ ನಾನು ಬ್ಯಾಡಗಿಗೆ ಬಂದಿರಲಿಲ್ಲ ಎಂದರೆ ನನಗೆ ನೆನಪಿಲ್ಲ. ಸದರಿ ದಿನ ಬ್ಯಾಡಗಿಗೆ ಯಾರು ಯಾರು ಬಂದಿದ್ದೆವು ಎಂದು ನೆನಪಿಲ್ಲ. ಸದರಿ ದತ್ತಕ ಆಯಿತು ಎನ್ನಲಾದ ಸಮಯದಲ್ಲಿ ನಾನು 8 ನೇ ತರಗತಿ ಓದುತ್ತಿದ್ದೆ. ಸದರಿ ದತ್ತಕ ಆದತಕ್ಷಣ ನನಗೆ ನನ್ನ ಹೆಸರು ಯಾವ ರೀತಿ ಬರೆಯಬೇಕು ಎಂದು ನನಗೆ ಗೊತ್ತಾಗುತ್ತಿರಲಿಲ್ಲ. ದತ್ತಕ ಆದ ದಿನವೇ ನನಗೆ ನಾನು ದತ್ತು ಹೋದ ಬಗ್ಗೆ ಗೊತ್ತಾಗಿರುತ್ತದೆ. ನನ್ನನ್ನು ಯಾರು ದತ್ತು ನೀಡಿದರು ಮತ್ತು ಯಾರು ದತ್ತು ಪಡೆದರು ಎಂದು ನೆನಪಿದೆ. ಸದರಿ ದಿನದ ಬಗ್ಗೆ ನನಗೆ ಬೇರೆ ಏನು ನೆನಪಿಲ್ಲ. ಸದರಿ ದತ್ತು ನೀಡುತ್ತಿದ್ದ ಬಗ್ಗೆ ನನ್ನ ಜನಕ ತಂದೆ ನನಗೆ ಹೇಳಿದ್ದರು. ನನ್ನ ಜನಕ ತಂದೆ ನನ್ನ ಅತ್ತೆಗೆ ನನ್ನನ್ನುದತ್ತು ನೀಡುತ್ತಿದ್ದೆವೆ ಎಂದು ಹೇಳಿದ್ದರು. ನನ್ನ ಅತ್ತೆಯ ಹೆಸರು ಪುಷ್ಪಾ ಕನ್ನಪ್ಪ ಕೊಪ್ಪದ. ನನ್ನದತ್ತಕ ತಂದೆ 05.11.2014 ರಂದು ತೀರಿಕೊಂಡಿರುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**.

ಓ.ಹೇ.ಕೆ.ಸರಿ ಇದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.